ಕರ್ನಾಟಕ ಸರ್ಕಾರ

**ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ**

ನಿರ್ದೇಶಕರ ಕಾರ್ಯಾಲಯ

ಸಂ: ಎಲ್‌ಜಿಎಲ್–2/ಇತರೆ/ಸಿಆರ್–09/2019–20

2ನೇ ಮಹಡಿ, ಕಲ್ಯಾಣ ಸುರಕ್ಷಾ ಭವನ, ಐಟಿಐ ಆವರಣ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 29, ದಿ: 21-11-2019

**ಸುತ್ತೋಲೆ**

ವಿಷಯ: ಕಾರ್ಖಾನೆಗಳ ಕಾಯ್ದೆ ಮತ್ತು ನಿಯಮಗಳನುಸಾರ ಸುರಕ್ಷತಾ ಅಧಿಕಾರಿಗಳ ನೇಮಕಾತಿ ಬಗ್ಗೆ ಪರಿಶೀಲಿಸುವ ಬಗ್ಗೆ.

*****

ಕಾರ್ಖಾನೆಗಳ ಕಾಯ್ದೆ, 1948ರ ಕಲಂ 40(ಬಿ)(1)(i) ರಲ್ಲಿ ನೊಂದಾಯಿತ ಕಾರ್ಖಾನೆಗಳಲ್ಲಿ 1,000 ಕ್ಕಿಂತ ಹೆಚ್ಚು ಕಾರ್ಮಿಕರನ್ನು ನೇಮಿಸಿಕೊಂಡಲ್ಲಿ ಸುರಕ್ಷತಾ ಅಧಿಕಾರಿಯನ್ನು ನೇಮಕ ಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ. ಕರ್ನಾಟಕ ಕಾರ್ಖಾನೆಗಳ ನಿಯಮಾವಳಿಗಳು, 1969ರ ನಿಯಮ 88ಎ(7)(3) ರಲ್ಲಿ ಈ ಕೆಳಕಂಡಂತೆ ತಿಳಿಸಲಾಗಿದೆ:

"The appointment of the Safety Officer when made, shall be notified by the occupier of the factory to the Chief Inspector of the Factories, giving full details about the qualifications, age, pay and allowances, previous experiences and other relevant particulars of the officer appointed and the terms and conditions of the services applicable to him."

ಈ ಹಿನ್ನೆಲೆಯಲ್ಲಿ, ನೊಂದಾಯಿತ ಕಾರ್ಖಾನೆಗಳಲ್ಲಿ 1,000ಕ್ಕಿಂತ ಹೆಚ್ಚು ಕಾರ್ಮಿಕರನ್ನು ನೇಮಕ ಮಾಡಿದ್ದಲ್ಲಿ / ಲೈಸೆನ್ಸ್ ನೀಡಿದ್ದಲ್ಲಿ ಅಂತಹ ಕಾರ್ಖಾನೆಗಳಲ್ಲಿ ಸದರಿ ನಿಯಮಗಳ ಅನುಸರಣೆ ಬಗ್ಗೆ ಪರಿಶೀಲಿಸುವುದು ಕ್ಷೇತ್ರಾಧಿಕಾರಿಗಳ ಕರ್ತವ್ಯವಾಗಿರುತ್ತದೆ.

ಮೇಲಿನ ನಿಯಮಗಳಲ್ಲಿ, ಸುರಕ್ಷತಾ ಅಧಿಕಾರಿಗಳನ್ನು ಕಾರ್ಖಾನೆಗಳಲ್ಲಿ ನೇಮಕ ಮಾಡಿಕೊಂಡಲ್ಲಿ ಇಲಾಖಾ ನಿರ್ದೇಶಕರಿಗೆ ವಿವರಗಳನ್ನು ಸಲ್ಲಿಸಬೇಕೆಂದು ತಿಳಿಸಿರುವ ಹಿನ್ನೆಲೆಯಲ್ಲಿ ನಿಯಮ 88ಎ ರಲ್ಲಿ ತಿಳಿಸಿರುವ ನಿಯಮಗಳನುಸಾರ ಸುರಕ್ಷತಾ ಅಧಿಕಾರಿಗಳ ವಿದ್ಯಾರ್ಹತೆ, ಅನುಭವ ಇರುವ ಬಗ್ಗೆ ಪರಿಶೀಲಿಸಿ ಸೂಕ್ತ ಹಿಂಬರಹ ನೀಡಬೇಕಾಗಿರುತ್ತದೆ.

Degree or diploma in Industrial Safety recognized by the State Government ಎಂಬ ನಿಯಮದ ಅಡಿಯಲ್ಲಿ ಈ ಕೆಳಕಂಡ ಸಂಸ್ಥೆಗಳನ್ನು ಪರಿಗಣಿಸಬಹುದು:

1. Central Labour Institute / Regional Labour Institute, Govt. of India.
2. Government Polytechnic, Ballary.
3. Rajiv Gandhi Institute of Steel Technology, Ballary.

4. International Institute of Industrial Safety Management (IIISM), Bangalore.

ಈ ಹಿನ್ನೆಲೆಯಲ್ಲಿ, ಎಲ್ಲ ಕ್ಷೇತ್ರಾಧಿಕಾರಿಗಳು ತಮ್ಮ ಕ್ಷೇತ್ರವ್ಯಾಪ್ತಿಯಲ್ಲಿನ 1,000 ಕ್ಕಿಂತ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಗಳಲ್ಲಿ ಸುರಕ್ಷತಾ ಅಧಿಕಾರಿಗಳ ನೇಮಕಾತಿ ಕುರಿತು ವಿವರಗಳನ್ನು ಪಡೆದು, ನಿಯಮಾನುಸಾರ ಸಮರ್ಪಕವಾಗಿರುವ ಬಗ್ಗೆ ಪರಿಶೀಲಿಸಿ ನಿರ್ದೇಶಕರ ಕಛೇರಿಗೆ ಕಳುಹಿಸಲು ಸೂಚಿಸಿದೆ. ಅಂತಹ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಕಾರ್ಖಾನೆಗಳ ಆಡಳಿತವರ್ಗದವರಿಗೆ ಹಾಗೂ ಕ್ಷೇತ್ರಾಧಿಕಾರಿಗಳಿಗೆ ಸೂಕ್ತ ಹಿಂಬರಹವನ್ನು ನೀಡಲಾಗುವುದು. ಎಲ್ಲ ಕ್ಷೇತ್ರಾಧಿಕಾರಿಗಳು ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸಲು ತಿಳಿಸಿದೆ.

ನಿರ್ದೇಶಕರು (ಅ/ಪ್ರ)
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ
ಸುರಕ್ಷತಾ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು.

ಇವರಿಗೆ:

1. ಕಾರ್ಖಾನೆಗಳು ಮತ್ತು ಬಾಯ್ಲರುಗಳ ಅಪರ ನಿರ್ದೇಶಕರು, ಬೆಂಗಳೂರು ರವರ ಮಾಹಿತಿಗಾಗಿ
2. ಕಾರ್ಖಾನೆಗಳ ಜಂಟಿ ನಿರ್ದೇಶಕರು ವಿಭಾಗ – 1 / 2 / 3 ಬೆಂಗಳೂರು / ಬಳ್ಳಾರಿ ರವರ ಮಾಹಿತಿಗಾಗಿ.
3. ಕಾರ್ಖಾನೆಗಳ ಉಪ ನಿರ್ದೇಶಕರು, ಬೆಂಗಳೂರು ವಿಭಾಗ – 1 / 2 / 3 / 4 / 5 ಮೈಸೂರು ವಿಭಾಗ – 1 / ಬೆಳಗಾವಿ ವಿಭಾಗ–1 / ಮಂಗಳೂರು ವಿಭಾಗ–1 / ಕಲಬುರ್ಗಿ ವಿಭಾಗ / ತುಮಕೂರು ವಿಭಾಗ.
4. ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ಬೆಂಗಳೂರು ವಿಭಾಗ– 6 / 7 / 8 / 9 / 10, / ಹುಬ್ಬಳ್ಳಿ ವಿಭಾಗ –1 / ಬೆಳಗಾವಿ ವಿಭಾಗ–2 / ಬಳ್ಳಾರಿ ವಿಭಾಗ.
5. ಕಾರ್ಖಾನೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ವಿಭಾಗ – 11 / 12 / 13 / 14/ 15 / 16 / 17 / 18 / 19 / 20, ದಾವಣಗೆರೆ ವಿಭಾಗ / ಶಿವಮೊಗ್ಗ ವಿಭಾಗ / ರಾಯಚೂರು ವಿಭಾಗ / ಹುಬ್ಬಳ್ಳಿ ವಿಭಾಗ–2 / ವಿ–2, ಮೈಸೂರು / ವಿ–2, ಮಂಗಳೂರು.
6. ಕಛೇರಿ ಪ್ರತಿ.